ಗಂಡನಿಗೆ ಕಾಶಿಯ ಹುಚ್ಚು; ಬಿಟ್ಟು ನಡೆದ. ಸುಮ್ಮನೆ ನಡೆದಿದ್ದರೆ ತೊಂದರೆ ಇರಲಿಲ್ಲ, ಹೋಗುವ ಮುನ್ನ ಇವಳಿಗೂ ಇವಳ ಮನೆಯ ಕೆಲಸದವನಿಗೂ ಸಂಬಂಧ ಇದೆ ಎಂದು ಹೇಳಿ ಹೋದ. ಅಲ್ಲಿಂದ ಇವಳ ಬದುಕು ಮೂರಾಬಟ್ಟೆ, ಎಲ್ಲಿಯೂ ಸಲ್ಲಲಿಲ್ಲ. ಅಪ್ಪ ಅಮ್ಮ ಇರುವವರೆಗೆ ಅಲ್ಲಿದ್ದಳು. ಈಗ ಅರವತ್ತೈದೋ ಅರವತ್ತಾರೋ ಇರಬೇಕು. ಅಲ್ಲಿ ಇಲ್ಲಿ ಎಲ್ಲ ಸಂಬಂಧಿಕರ ಮನೆಯಲ್ಲಿರುತ್ತಾಳೆ. ವಾರಾನ್ನದವಳ ಹಾಗೆ... ಒಂದು ದಿನವೂ ಒಳ್ಳೆಯ ಬಟ್ಟೆ ಉಟ್ಟಿದ್ದು ಯಾರೂ ಕಂಡಿಲ್ಲ. ಕಣ್ ತುಂಬ ನಿದ್ದೆ ಮಾಡಿದ್ದು ನೋಡಿದ್ದು ಕೂಡ. ಅವರಿವರು ಉಟ್ಟುಬಿಟ್ಟದ್ದು ಉಡುತ್ತಾಳೆ. ಯಾರಾದರೂ ಒಳ್ಳೆಯದನ್ನು ಕೊಟ್ಟರೂ 'ತನಗ್ಯಾಕೆ ಗಂಡ ಬಿಟ್ಟವಳಿಗೆ' ಎನ್ನುತ್ತಾಳೆ. ಒಂದು ದಿನವೂ ಅಳುವುದಿಲ್ಲ. ನಗುವುದೂ ಇಲ್ಲ. ಹೋದವರ ಮನೆಯಲ್ಲೆಲ್ಲ ಒಂದು ನಿಮಿಷವೂ ಕೂರದೇ ದುಡಿಯುತ್ತಾಳೆ. ಎಷ್ಟೇ ದಣಿದರೂ ರಾತ್ರಿ ಪೂರಾ ಕೂತೇ ಕಾಲ ಕಳೆಯುತ್ತಾಳೆ. ಊರೆಲ್ಲ ತಿರುಗಿ ಬಂದರೂ ಮನೆಯ ಸುದ್ದಿಗಳನ್ನು ಆಚೀಚೆ ಮಾಡುವುದಿಲ್ಲ. ಸದಾ ಮೌನಿ, ಸಣ್ಣವಳಿದ್ದಾಗ ಅವಳು ಸಿಕ್ಕಾಪಟ್ಟೆ ಮಾತನಾಡುತ್ತಿದ್ದಳಂತೆ, ಈಗಿಲ್ಲ.

ತನ್ನ ಅವಸರ ನೋಡಿ ಕೇಳಿಯೇ ಕೇಳುತ್ತಾಳೆ ಇವಳು ಎಂದು ಕೌಸಲ್ಯ ಅಂದುಕೊಳ್ಳುವಾಗಲೇ. "ಎಂತ ಕೌಲ್ಯ ಬೆಳಿಗ್ಗೆ ದೂರ" ಎಂದು ಕೇಳಿಯೇ ಬಿಟ್ಟಳು ಅಕ್ಕಯ್ಯಮ್ಮ. ಇವಳಿಗೆ ಉತ್ತರಿಸಲು ಮನಸ್ಸಿಲ್ಲ ಮತ್ತು ಸಮಯವಿಲ್ಲ. ಆದರೂ ಉತ್ತರಿಸಿದಳು ಚುಟುಕಾಗಿ – "ದೇವಸ್ಥಾನಕ್ಕೆ."

ಒಳಗಿನಿಂದ ಮುದುಕಿ ಸಣ್ಣಗೆ ಹೇಳಿಯೇ ಬಿಟ್ಟಿತು: "ಕಲ್ಯಾಣ ಮಂಟಪಕ್ಕೆ." ಅಕ್ಕಯ್ಯಮ್ಮನಿಗೆ ಕೌಸಲ್ಯನ ಮನಸ್ಸು ಅರ್ಥವಾಯಿತು. ಈ ಹುಡುಗಿಗೆ ಹೇಳುವ ಮನಸ್ಸಿಲ್ಲ. ಕಂಡವರ ಮನೆಯ ಉಸಾಬರಿ ತನಗ್ಯಾಕೆ ಎಂದು ಸುಮ್ಮನಾದಳು. ಅವಳ ಆ ಮೌನಕ್ಕೆ ಕೌಸಲ್ಯ ಪೆಚ್ಚಾದಳು. ಮಲಗಿದ್ದ ಮುದುಕಿ ಎದ್ದು ಬಂದು, "ಅದೆಂತದೋ ಕಲ್ಯಾಣವಂತೆ. ಹದಿನೈದು ದಿನದಿಂದ ಒಂದು ದಿನವೂ ಕಾಲು ಮನೆಯಲ್ಲಿಲ್ಲ. ಏನ್ ಕೇಳ್ತಿ ಇವ್ಳು, ಇವ್ಳ ಕೆಲಸವಿಲ್ಲದ ಗೆಳತಿಯರ ಕಾರು ಬಾರನ್ನ" ಎಂದು ಕಹಿ ಪೂರಾ ಕಕ್ಕಿತು. ಹಸಿರು ಸೀರೆಗೆ ಇಸ್ತ್ರೀ ಉಜ್ಜುತ್ತಲೇ ಸಿಡುಕಿ ಹೇಳಿದಳು ಕೌಸಲ್ಯ, "ಅದು ಲೋಕ ಕಲ್ಯಾಣಕ್ಕೆ."

ಅಕ್ಕಯ್ಯಮ್ಮ ಏನೂ ಕುತೂಹಲ ತೋರದೆ, "ನೀನು ಹೊರಡು ಕೌಸಲ್ಯ ನಾನು ಮನೆ ನೋಡಿಕೊಳ್ಳುತ್ತೇನೆ."

ಕೌಸಲ್ಯಳ ಮುಖ ಅರಳಿತು.



ಗುರು ನಾವಳ್ಳಿ